೧೯೮೯ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ (ಲೇಖಾನುದಾನ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಪ್ರೊ॥ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು) (ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ,

೧೯೮೯ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ (ಲೇಖಾನುದಾನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇವೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಪ್ರೊ॥ ಎ. ಲಕ್ಷ್ಮೀಸಾಗರ್. – ಅಧ್ಯಕ್ಷರೆ, ಇದರಬಗ್ಗೆ ಈಗಾಗಲೇ ಡಿಸ್‌ಕಷನ್ ಆಗಿದೆ, ಇದನ್ನು ಪಾಸ್ ಮಾಡಬೇಕು.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: ೧೯೮೯ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ (ಲೇಖಾನುದಾನ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಅಧ್ಯಕ್ಷರು. – "ಖಂಡ ೨ ಮತ್ತು ೩ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ ಮತ್ತು ೩ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ :

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಮೊದಲನೇ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು

ಪ್ರಸ್ತಾವದ ಅಂಗೀಕಾರ

ಪ್ರೊ॥ ಎ ಲಕ್ಷ್ಮೀಸಾಗರ್,—೧೯೮೯ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : "೧೯೮೯ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ (ಲೇಖಾನುದಾನ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು.—ಈಗ ೧೯೮೯ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು.....

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ, ಈಗ ಲೇಟಾಗಿದೆ. ಇದನ್ನು ನಾಳೆದಿವಸ ಕನ್ಸಿಡರೇಷನ್‌ಗೆ ತೆಗೆದುಕೊಳ್ಳೋಣ.....

(ಗೊಂದಲ)

ಪ್ರೊ॥ ಎ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈಗ ೨ ಆರ್ಡಿನೆನ್ಸ್ ರೀಪ್ಲೇಸಿಂಗ್ ಬಿಲ್ಸ್ ಇವೆ. ಇನ್ನುಳಿದ ೮ ಬಿಲ್ಲುಗಳು ತೆರಿಗೆಗೆ ಸಂಬಂಧಪಟ್ಟವು. ಆರ್ಡಿನೆನ್ಸ್ ರೀಪ್ಲೇಸಿಂಗ್ ಬಿಲ್ಸ್ ಅತಿಮುಖ್ಯವಾಗಿ ಆಗಲೇಬೇಕು. ಇವು ಕಳೆದಸಾರಿಯೇ ಆಗಬೇಕಾಗಿತ್ತು. ಆದರೆ ಆಗಲಿಲ್ಲ. ಈ ಸಾರಿಯಂತೂ ಪಾಸ್ ಆಗಲೇಬೇಕು. ಇಲ್ಲದಿದ್ದರೆ ಇವು ಲ್ಯಾಪ್ಸ್ ಆಗುತ್ತವೆ. ಇನ್ನುಳಿದ ೮ ಬಿಲ್ಲುಗಳು ತೆರಿಗೆಗೆ ಸಂಬಂಧಪಟ್ಟಂತೆ ಏನಿವೆ ಇದರ ಬಗ್ಗೆ ಚರ್ಚೆಯಾಗಿದೆ. ಈಗ ಈ ಸಭೆಯು ಒಪ್ಪಿಗೆ ಆದಮೇಲೆ ವಿಧಾನ ಪರಿಷತ್ತಿಗೆ ಹೋಗಬೇಕು, ನಂತರ ಪ್ರಿಂಟ್ ಆಗಬೇಕು. ಈ ರೀತಿಯ ತೊಂದರೆ ಇರುವುದರಿಂದ ಇವತ್ತು ಇವನ್ನು ಪಾಸ್ ಮಾಡಲೇಬೇಕಾಗಿದೆ. ಬಹಳ ಹೊತ್ತೇನೂ ಆಗುವುದಿಲ್ಲ.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾಳೆ ತೆಗೆದುಕೊಳ್ಳೋಣ. ನಾವು ಪಾಸ್ ಮಾಡಿ ಕೊಡುತ್ತೇವೆ. ಆದರೆ ಈಗ ನಮಗೆ ಬಹಳ ತ್ರಾಸ್ ಆಗಿದೆ...

ಅಧ್ಯಕ್ಷರು.—ನಿಮಗೆ ಇಷ್ಟು ತ್ರಾಸ ಆಗಿದ್ದರೆ ನನಗೆ ಎಷ್ಟು ತ್ರಾಸ ಆಗಿರಬಹುದು, ನೀವೇ ಹೇಳಿ. ಹೀಗೆಲ್ಲಾ ಮಾಡಿದರೆ ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯು ತೀರ್ಮಾನದ ಪ್ರಕಾರ ಸಭೆಯನ್ನು ನಡೆಸಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗಾದರೆ ನಾಳೆ ಮೊದಲು ಬಿಲ್ಸ್ ಆಗಬೇಕು. ಅನಂತರ ಕೊಶ್ಚನ್ ಅವರನ್ನು ತೆಗೆದುಕೊಳ್ಳಬೇಕು.

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ತಾವು ೧೧ ಗಂಟೆಗೆ ಸಭೆಯನ್ನು ಇಟ್ಟುಕೊಳ್ಳುವುದಾದರೆ ಮೊದಲು ಬಿಲ್ಸ್ ತೆಗೆದುಕೊಂಡು ನಂತರ ಕೊಶ್ಚನ್ ಅವರ್, ಖಿಖಿಳ, ಇತ್ಯಾದಿ, ಇತ್ಯಾದಿ, ತೆಗೆದುಕೊಳ್ಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಆಗಬಹುದು.....

ಅಧ್ಯಕ್ಷರು.—ಈಗ ಸಭೆಯನ್ನು ಇಲ್ಲಿಗೆ ಮುಕ್ತಾಯಮಾಡಿ ನಾಳೆ ಬೆಳಗ್ಗೆ ೧೧ ಗಂಟೆಯವರೆಗೂ ಮುಂದೂಡಿದ್ದೇನೆ. ಎಲ್ಲರಿಗೂ ಧನ್ಯವಾದಗಳು.

(ಸದನವು ಸಾಯಂಕಾಲ ೭ ಗಂಟೆ ೨೩ ನಿಮಿಷಕ್ಕೆ ಮುಕ್ತಾಯವಾಗಿ ದಿನಾಂಕ ೨೮-೩-೧೯೮೪ ರಂದು ಮಂಗಳವಾರ ೧೧ ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು)